ಶನಿವಾರದ ಸಂಚಿಕೆ
Reg No. M 1293
Daily & Weekly

For All Kinds of
Printing & Binding
The
Satyavadi
Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 329] ಶನಿವಾರ 10—7—1943 6 ಪೈ

ಹೆಚ್. ಆರ್. ಜಿ. ಸಿ. ಯವರ
ಶ್ರೀ ಪಿಕರ್ಸ್
ತಯಾರಿಕೆ
ವಾಣಿ OR
[Violinist]
ಎಂಬ ಕನ್ನಡ ಸಾಮಾಜಿಕ ಚಿತ್ರ
ನಿಮ್ಮ ಮನರಂಜನೆಗಾಗಿ ಬೇಗನೆ ಒರಲಿದೆ

ಮಸ್‌ಕ್ವಿಟೊ ವಿಮಾನ

ಮಸ್‌ಕ್ವಿಟೊ ಬಾಂಬ್ ಕಾರುವ ವಿಮಾನಗಳು ಇಂಗ್ಲೆಂಡ್, ಕೆನಡಾದಲ್ಲಿ ತಯಾರಾಗುವುವು ಇದಕ್ಕೆ ಸಮನಾದ ಜರ್ಮನಿಯರ ಕೈಲಿ ಕಟ್ಟಲು ಸಾಧ್ಯವಿಲ್ಲ. ಇದು ಭೂಮಿಗೆ 15--20 ಅಡಿಯುಲ್ಲಿ ಬಾಂಬುಗಳನ್ನು ಹಾಕುವ ಶಕ್ತಿ ಇದೆ. ಇದರಲ್ಲಿ 2000 ಪೌಂಡು ಬಾಂಬುಗಳನ್ನು ಇಡುವರು. ಇದು ಗಂಟೆಗೆ 400 ಮೈಲಿಯಂತೆ ಓಡಬಲ್ಲದು. ಇದು ಭೂಮಿಗೆ ಸಮಾಪ ಬರುವುದರಿಂದ ಗುರಿಯಿಟ್ಟು ಗುಂಡು ಹಾರಿಸಲು ಅನುಕೂಲವಾಗುವುದು. ಬ್ರಿಟಿಷ್ ವಿಮಾನಗಳಲ್ಲಿ ಇದಕ್ಕೆ ಶ್ರೇಷ್ಟತ್ವ ಕೊಟ್ಟಿದೆ. ಇದು ಏಕಕಾಲದಲ್ಲಿ 700 ಮೈಲಿಯು ವರೆಗೂ ಹೋಗುವ ತ್ರಾಣವಿದೆ. ಇದರಷ್ಟು ಶಕ್ತಿ ಮತ್ತಾವ ವಿಮಾನಕ್ಕೂ ಇಲ್ಲ ಇದನ್ನು ಸೋಲಿಸಲು ತ್ರಾಣ ಇನ್ನಾವ ವಿಮಾನಕ್ಕೂ ಇಲ್ಲ, ಇದರಲಿ ನಾಲ್ಕು ಇಪ್ಪತ್ತು ಮಿಲಿಮಿಟರ್ ಕ್ಯಾನನ್ ಮತ್ತು ಮತ್ತ ವೂವತ್ತು ಕ್ಯಾಲಬ್ರಿ ಮೆಷಿನ್‌ಗನ್ ಇಟ್ಟಿರುತ್ತಾರೆ. ಇದನ್ನು ನಡೆಸುವವರು ಇಬ್ಬರು. ಇದು ಗಂಟೆಗೆ 400 ಮೈಲಿಯಂತೆ ಹೋಗುವಾಗ 15 ಅಡಿಯನ್ನು ೦.೦45 ಸೆಕೆಂಡು ಕಾಲದಲ್ಲಿ ಹೋಗಿ ಗುಂಡನ್ನು ಹಾರಿಸಬೇಕು. ಇದಕ್ಕಾಗಿ ಬಹು ಸೂಕ್ಷ್ಮ ಬುದ್ಧಿ ಇರಬೇಕು. ಸ್ವಲ್ಪ ಬೇಸ್ತುಪ್ಪಾದರೂ ವಿಮಾನ ಉಳಿಯುವುದೇ ಕಷ್ಟ. ಇದನ್ನು ನಡೆಸುವವರು ನಿಪುಣರು. ಈ ಮಸ್‌ಕ್ವಿಟೊ ವಿಮಾನ ಮಾಡುವ ಕೆಲಸ ನೋಡಿ ಉತ್ತರ ಆಫ್ರಿಕಾದಲ್ಲಿ ಜರ್ಮನರು ದಿಗ್ಬ್ರಮೆಯಾದರು. ಯೂರೋಪಿನ ಎರಡನೇ ರಣರಂಗದಲಿ ಈ ವಿಮಾನಗಳು ಬಹಳ ಕೆಲಸ ಮಾಡುವುದೆಂದು ಸಂಬಲಾಗಿದೆ. ಇಂಥ ವಿಮಾನಗಳು ಹತ್ತು ಸಾವಿರ ತಯಾರಾದರೆ ವಿತ್ರರಿಗೆ ಇದು ಕಷ್ಟವಲ್ಲ ಜರ್ಮನರನ್ನು ಗೆಲ್ಲಲು ಬಹಳ ಕಾಲ ಬೇಕಾಗಿಲ್ಲ. ಈ ಮಸ್‌ಕ್ವಿಟೊ ರಷ್ಯನರೂ ಸಹಾ ಬೇಕೆನ್ನುವರು. ಇದು ಇಷ್ಟರಲ್ಲೆ ಟೋಕಿಯೋ ವೇಲು ಹಾರಾಡುವುದರಲ್ಲಿ ಸಂದೇಹವಿಲ್ಲ.

ಭಾರತದ ಸಮಸ್ಯೆ

ಈಗ ಅಮೇರಿಕಾದಲ್ಲಿರುವ ಇಂಡಿಯಾನ ಯುಗ್ರಸಕ್ಸನ ಮುಖಂಡರಾದ ಡಾ || ಅಸೂಫ್ ಸಿಂಗರವರು ಮಾತನಾಡುತ್ತಾ— ಭಾರತ ವಿಷಯದಲ್ಲಿ ಇಂಗ್ಲೆಂಡು ಈಗಿರುವಂತೆ ಇದ್ದರೆ ಸಂಧಿಕಾಲದಲ್ಲಿ ಉಭಯತ್ರರಿಗೂ ಬಹಳ ಕಷ್ಟವಾಗುವುದು. ಭಾರತದ ಸಮಸ್ಯೆಯನ್ನು ಬಗೆಹರಿಸಬೇಕಾದರೆ (1) ರಾಜಕೀಯ ಖೈದಿಗಳನ್ನು ಯಾವ ಷರತ್ತೂ ಇಲ್ಲದೆ ಬಿಡಬೇಕು (2) ಯುದ್ಧ ಮುಗಿದನಂತರ ಗೊತ್ತಾದ ಕಾಲದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಕೊಡುತ್ತೇವೆಂದು ಚಕ್ರವರ್ತಿಗಳು ಪ್ರಕಟಣೆ ಮಾಡಬೇಕು (3) ಈಗ ಎಲ್ಲ ಪಂಗಡಗಳ ರಾಷ್ಟ್ರೀಯ ಸರಕಾರ ಸ್ಥಾಪನೆಯಾಗಬೇಕು ; ಇವರಿಗೆ ಎಲ್ಲ ಅಧಿಕಾರ ಮಿಲಿಟರಿ ಸಹ ಕೊಡಬೇಕು (ಯುದ್ಧ ನಡೆಯುವವರೆಗೆ ಮಿಲಿಟರಿ ಅಧಿಕಾರವಿಲ್ಲ) (4) ಭಾರತದ ಎಲ್ಲಾ ಕೋಮುಗಳನ್ನೂ ಒಂದಾಗುವಂತೆ ಮಾಡಬೇಕು (5) ಮಿತ್ರರ ರಾಜ್ಯಗಳು ಭಾರತಕ್ಕೆ ಸ್ವಾತಂತ್ರ್ಯ ಕೊಡುತ್ತೇವೆಂದು ಹೇಳಬೇಕು.

—

ಶತ್ರುಗಳು ಈಗಿನ ಯುದ್ಧದಲ್ಲಿ ಖೈದಿ ಶಾಚಿ ಕೃತ್ಯದಿಂದ ಯಾರುಯಾರಿಗೆ ನಷ್ಟವಾಗಿದೆ ಎಂಬುವುದನ್ನು ಪರೀಕ್ಷಿಸಲು ಬ್ರಿಟಿಷ್ ಸರಕಾರದವರು ಒಬ್ಬ ಅಧಿಕಾರಿಯನ್ನು ನೇಮಿಸಿರುತ್ತಾರೆ.

ಮಾರ್ಚಿ ತಿಂಗಳಿಂದ ಲಂಡನ್ ಮತ್ತು ಲಂಡನ್ನಿನ ಬಳಿ ಶತ್ರುಗಳ ಹಗಲಿನ ವಿಮಾನಧಾಳಿ ನಡೆದಿರಲಿಲ್ಲ. ನಿನ್ನೆ ದಿವಸ ಧಾಳಿಯಾಗಿ ಕೆಲವು ಅಂಗಡಿ ಫನೆ ಒಂದು ಸಿನಿಮಾ ಇವು ಧಾಳಿಗೆ ಕುತ್ತಾಗಿ ಸಿನಿಮಾದಲ್ಲಿದ್ದ 10--12 ಮಂದಿ ಸತ್ತರು.

ವರ್ತಮಾನ ಸಂಗ್ರಹ

ಮೈಸೂರು ಸರಕಾರದ ಉಸಕಾರ್ಯದರ್ಶಿಗಳಾದ ಶ್ರೀ ಪರದರಾಜ್ಯಂಗಾರ್ಯರು ಪಬ್ಲಿಸಿಟಿ ಆಫೀಸರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಪ್ರಜಾಪ್ರತಿನಿಧಿ ಸಭೆಯು ದಸರಾ ಅಧಿವೇಶನವು ಮೈಸೂರು ಜಗನ್ಮೋಹನ ಬಂಗಲೆಯಲ್ಲಿ 4-10-43 ರಿಂದ ಪ್ರಾರಂಭವಾಗುವುದು.

ಬೆಂಗಳೂರಿನಲ್ಲಿ ಸೌದೆ ಮತ್ತು ಹರಳೆಣ್ಣೆ ಬೆಲೆ ಏರಿದೆ ಎಷ್ಟೋತ ಏರಿದೆ.

ಆಹಾರ ಸಮ್ಮೇಳನವು ದೆಹಲಿಯಲ್ಲಿ ನಡೆದದ್ದು ಬಂಗಾಳಾಕ್ಕೆ ಅನುಕೂಲವಾಯಿತೆಂದು ಬಂಗಾಳಾವ ಆಹಾರ ಮಂತ್ರಿಯವರ ಹೇಳಿಕೆ.

ಬೈಲ್‌ಗೊರಾಡ್ ಒಳಿ ಜರ್ಮನ್ ಪ್ಯಾನ್‌ಸರ್ ಧಾಳಿ ರಷ್ಯನ್ ಸೈನ್ಯವ್ಯೂಹವನ್ನು ಛೇದಿಸಿಕೊಂಡು ಸುಗ್ಗಿದೆ. ಉತ್ತರ ದಿಕ್ಕಿನಲ್ಲಿ ರಷ್ಯನರು ಪ್ರತಿಧಾಳಿ ಮಾಡಿರುತ್ತಾರೆ. 24 ಗಂಟೆಗಳಲ್ಲಿ ಜರ್ಮನರ 304 ಟ್ಯಾಂಕ್, 161 ವಿಮಾನ ನಾಶವಾಗಿದೆ. ಈ ದಿವಸ ರಷ್ಯನರು ತಮ್ಮ ಟ್ಯಾಂಕ್‌ಪಡೆ ಕದನಕ್ಕೆ ತಂದರು.

ವಿವಿಧ ವಿಷಯ

ರಷ್ಯ ಸರ್ಕಾರದವರ ಸಂಗಡ ಮಾತನಾಡಲು ಲಂಡನ್‌ನಲ್ಲಿದ್ದ ರಷ್ಯನ್ ರಾಯಭಾರಿ ವಿ|| ಎಂ. ಮೈಯಿಸ್ಕಿಯವರು ಮಾಸ್ಕೋವಿಗೆ ಪ್ರಯಾಣ ಮಾಡಿದರು.

ಬ್ರಿಟಿಷರು ಹೊಸ ತರಹ ಎರಡು ವಿಧ ವಿಮಾನಗಳನ್ನು ತಯಾರು ಮಾಡಿರುವರು. ಇವು ಫ್ರಾನ್ಸ್, ಬೆಲ್ಜಿಯಂ ಹಾಲೆಂಡ್ ಮೇಲೆ ಮೊದಲಾವರ್ತಿ ಹಾರಾಡಿದವು.

ಭಾರತದ ಹೈ ಕಮಿಷನರಾಗಿರುವ ಸರ್ ಎಸ್. ಇ. ರಂಗನಾಥರವರು 8-7-43 ರಲ್ಲಿ ಲಂಡನ್‌ನಲ್ಲಿ ಚಕ್ರವರ್ತಿಗಳನ್ನು ನೋಡಿದರು.

ಮೈಸೂರಿನಲ್ಲಿ ದಸರಾ ವಸ್ತುಪ್ರದರ್ಶನವು 30-9-43 ರಿಂದ 15-10-43 ರವರೆಗೆ ನಡೆಯುವುದು.

ಮಿತ್ರರ ವಿಮಾನ ಧಾಳಿ ಏಟನ್ನು ತಡೆಯಲಾರದೆ ಫ್ರೆಂಚ್ ತೀರವನ್ನೆಲ್ಲಾ ಖಾಲಿ ಮಾಡಲು ಆಜ್ಞೆಯಾಗಿದೆ.

2nd Week Extended ‘Going Strong’

— EVENING SHOWS —
New Opera Talkies, From 2–7–43
BLOOD & SAND
A Super Technicolour Picture
Featuring Tyrone Power & Linda Darnell

Do not miss to see this thrilling picture, which is attracting a crowded house, all from the beginning.

ಈ ವಾರದ ಕಥೆ—

ಸ್ವಯಂಕೃತಾಪರಾಧ

(ಕಳೆದ ವಾರದ ಸಂಚಿಕೆಯಿಂದ ಮುಂದುವರಿದುದು.)

ಮೂರ್ತಿಯು ಚೇತರಿಸಿಕೊಂಡೆದ್ದು, ಕಣ್ಣು ಕಾಣದ ಮೇಲೆ ಯಾವ ಮನುಷ್ಯನೂ ಬದುಕಿರಕ್ಕಿದ್ದೇ ಇಲ್ಲ, ಬದುಕಿರುವುದಕ್ಕಿಂತ ಸಾಯುವುದೇ ಲೇಸಾಗಿದ್ದು, ಅಯ್ಯೋ ನನ್ನ ಜನ್ಮವೇ ಇಷ್ಟು ನಾನು ಬದುಕಿರಬೇಕೆ, ದೀಪಟಿಗೆಗಳನ್ನು ಹತ್ತಿಸಿಕೊಂಡು ಮಾವ ಮುಂತಾದವರೆಲ್ಲರೂ ಹುಡುಕಿಕೊಂಡು ಒರುತ್ತಾರಲ್ಲ, ಇನ್ನಿವರಿಗೆ ನಾನು ಮುಖವನ್ನು ತೋರಿಸಿಕೊಂಡು ಹೇಗೆ ಬದುಕಿರುವುದು, ದೇವರೇ ಏನು ವಿಪತ್ತು ಮಾಡಿದೆ ಇದನ್ನು ಹೇಗೆ ಸಹಿಸಿಕೊಂಡಿರಲಿ, ಎಂದು ಮುಂತಾಗಿ ಯೋಚಿಸುತ್ತಿರುವ ಸಮಯದಲ್ಲಿ ಅಕ್ಕಸಾಲೆಯು ಮನೆಯಿಂದ ಹೊರಟ ಭೀಮಣ್ಣನು ಎಷ್ಟು ಉಪಕಾರ ಮಾಡಿದರೂ ಅಗಸಾಲಿಗರ ಯೋಗ್ಯತೆಯೇ ಇಷ್ಟು ನಾಗರನನ್ನು ಸರಿಗೆತ್ತುವುದು ಒಂದು ಘಾಟಿ ಕೆಲಸವಾಗುವುದಿಲ್ಲ ಇದಕ್ಕಾಗಿ ಎಷ್ಟುವರ್ತ ಇವನ ಮನೆಗೆ ಸುತ್ತುವುದು ಸುತ್ತಿಸುತ್ತಿ ಬೇಜಾರಾಯಿತು. ಈವತ್ತು ಕಂಪೆನಿಯವರ್ಕೆಗಳನ್ನು ಎಡಿದವರ ಮೇಲೆ ಸಮಾಡುವ ಬಗ್ಗೆ ಈಗ ಕುಳಿತಿದ್ದಾನೆ ಕಮಲೆಯನ್ನು ಬಳಿಯುವ ಜೀಕೆಯಲ್ಲೇ ಪ್ರಯಾಣ ಮಾಡಿಸಬೇಕು. ನಾಗರವಿಲ್ಲದೆ ಪ್ರಯಾಣ ಮಾಡಿಸುವುದಕ್ಕಿಲ್ಲ. ಅಳಿಯನೋ ಬಹಳ ಕಡಿದು, ಅರು ವರುಷಕ್ಕೆ ಈಗಲೇ ಅವನ ದರ್ಶನ. ಹರಕರದೂರು ಮಾಡಿ ಅಳಿಯನ ಜೊತೆಯಲ್ಲಿ ಕಮಲೆಯನ್ನು ಈಗ ಕಳುಹಿಸದೆ ಬಿಟ್ಟಲಿ ಆಗುವದಿಲ್ಲ. ಈ ಕಾಲದ ಹುಡುಗು ಯೋಗ್ಯತೆ ಗೊತ್ತೇ ಇದೆಯಲ್ಲಾ. ಹೆಂಡತಿ ಹಾಕೋ ಗಂಡನಾರೋ ಎಂಬುವ ಸಮಾಚಾರವೇ ಎಂದು ಮುಂತಾಗಿ ಗೊಣಗುಟ್ಟುತ್ತಾ ಒರುತ್ತಿರುವ ಶಬ್ದವನ್ನು ಕೇಳಿ "ಓಹೋ ತಲ್ಲಿಯೂ ಮಾವನೇ; ಎಲ್ಲರೂ ದೀವಟಿಗೆಗಳನ್ನು ಹಿಡಿದುಕೊಂಡು ಬರುತ್ತಾರಲ್ಲಾ, ಈ ಅವಮಾನವನ್ನು ಹೇಗೆ ಸಹಿಸಲಿ ಎಂದು ವ್ಯಸನಪಡುತ್ತಿದ್ದೆ, ಸಪ್ಪಳಕ್ಕೆ ಇಷ್ಟರಲ್ಲೇ ಪರ್ಯವಸಾನನಾಯಿತಲ್ಲಾ ಈಗ ಸುಮ್ಮನಿರಕ್ಕಿದ್ದಲ್ಲ ಮೊದಲನೇ ಉಪಾಯದಿಂದಲೇ ಕಡೆಹಾಯಬೇಕು ಎಂದುಕೊಂಡು ಮೂರ್ತಿಯು ಗುಂಡಿಯಲ್ಲೇ ಬೆಕವನ್ನು ಬಡಿದು ಶಬ್ದಮಾಡುತ್ತಾ, ಒಂದೂ, ಎರಡು ಎಂದು ಹೇಳುವುದಕ್ಕೆ ಉಪಕ್ರಮಿಸಿದನು.

ಕಾಣೇಕನು ಇದನ್ನು ಕೇಳಿ, ಪುನಃ ಬಂದೇ ಪ್ರಾರಬ್ಧ, ಏನು ಭ್ರಾಂತಿಯಾರಿಗೆ ಮೋಜಣೇ ಕೆಲಸವಾಗುವುದಿಲ್ಲ, ಯಾರಿಗೆ ಹುದ್ದೇ ಒರುವುದಿಲ್ಲಾ, ಬಂದಮಾತ್ರದಿಂದಲೇ ಇವನ ಭ್ರಾಂತಿ ಹತ್ತಿಸಿಕೊಳ್ಳಬೇಕು ಎಂದು ಗುಡಿಯ ಹತ್ತಿರಕ್ಕೆ ಒಂದು, ಒಗೆದ್ದ ಮೂರ್ತಿಯನ್ನು ನೋಡಿ, ಸಾಕು ಸಾಕು ಏಳಿ ಇದು ಕೋಟೆಯೂ ಗಿಂಡಿಯಲ್ಲಾ, ಗತಗಸದ ಗುಂಡಿ, ಹತ್ತಿ ಬನ್ನಿ ಮನೆಗೆ ಹೋಗೋಣ ಎಂದನು. ಮೂರ್ತಿಯು ಈ ಮಾತಿಗೆ ಯಾವ ಉತ್ತರವನ್ನೂ ಹೇಳದೆ ನುಮ್ಮ ನಿದ್ದುದನ್ನು ನೋಡಿ, ಭೀಮಣ್ಣನು ತಾನೇ ಗುಂಡಿಯನ್ನಿಳಿದು ಕೈಹಿಡಿದುಕೊಂಡು, ಮೂರ್ತಿಯನ್ನು ಮೇಲಕ್ಕೆ ಹತ್ತಿಸಿ ಕರೆತಂದು, ಪಡಸಾಲೆಯಲ್ಲಿ ಹಾಸಿದ್ದ ರತ್ನಕಂಬಳಿಯ ಮೇಲೆ ಕೂರಿಸಿ, ವಾರ್ತೆಯಿಂದ ಮಾತನಾಡಿಸುತ್ತಿರುವಂತೆ ಮೈತ್ಯಳಿಗೆ ಕಟ್ಟುಮಾಡಿ, ಮುಂದಿನ ಕೆಲಸವನ್ನು ನೋಡಿಕೊಳ್ಳುವ ಬಗ್ಗೆ ತಾನು ಮನೆಯೊಳಕ್ಕೆ ಪ್ರವೇಶಿಸಿದನು.

— 4 ನೇ ಅಧ್ಯಾಯ —

ಭೀಮಣ್ಣನು ಸಾಮಾನ್ಯ ಮನುಷ್ಯನಲ್ಲ. ಊರಿಗುಂಟಾದ ಕಾಣೇಕ. ಯಾವ ಪಂಚಾಯಿತಿಯೂ ಭೀಮಣ್ಣನ ಮನೆಯಲ್ಲಿ ನಡೆಯಬೇಕು. ಯಾವ ಲೆಖ್ಖಾಚಾರವೂ ಭೀಮಣ್ಣನ ಮನೆಯಲ್ಲಿ ಇತ್ಯರ್ಥವಾಗಬೇಕು. ಇದಕ್ಕಾಗಿ ಭೀಮಣ್ಣನ ಮನೆಗೆ ಜನರು ಒಂದುಹೋಗುತ್ತಲೇ ಇರುವರು.

ಭೀಮಣ್ಣನು ದಾಸಿಕೂಟಕ್ಕೆ ಸೇರಿದವನಾಗಿದ್ದರೂ ಬಹಳ ಘಟ್ಟಿಗ. ಅವಾಲ್ಮೀಕಿಯದಲ್ಲಿ ಹುಂಕಥಾದೃತಸಾರವಂತಾದ ಪ್ರಾಚೀನ ಗ್ರಂಥಗಳಿಗೆ ಅರ್ಥವಿವರಣೆ ಮಾಡುವುದರಲ್ಲಿ ಭೀಮಣ್ಣನೇ ಘಟ್ಟಿಗನೆಂದು ಹೆಸರುವಾಸಿಯನ್ನು ಪಡೆದಿದ್ದನು.

ಭೀಮಣ್ಣನಿಗೆ ಗಂಡುಮಕ್ಕಳು ಐದು ಮಂದಿ. ಕಮಲೆಯೊಬ್ಬಳೇ ಹೆಣ್ಣು ಮಗಳು. ಊರಿನಲ್ಲಿರತಕ್ಕ ಹತ್ತುಹನ್ನೆರಡು ಬ್ರಾಹ್ಮಣರ ಮನೆಗಳ ಪೈಕಿ ಆರು ಮನೆಗಳು ಭೀಮಣ್ಣನ ಅಳಿಯಾವಿಗಳವೇ,

[ಮುಂದುವರಿಯುವುದು

ಸುಭಾಷ್ ಚಂದ್ರಬೋಸ್

ಜರ್ಮನರೂ ಜಪಾನಿಗಳೂ ದೊಡ್ಡ ದೊಡ್ಡ ಸಬ್‌ಮೆರೀನುಗಳಲ್ಲಿ ತಮಗೆ ಮುಖ್ಯವಾಗಿ ಬೇಕಾದ ಪದಾರ್ಥಗಳನ್ನೂ ಕೆಲಸಗಾರರನ್ನೂ ಒದಲಾಯಿಸಿಕೊಳ್ಳುತ್ತಿರುವದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ ಆದು ಈಗ ಶ್ರೀ ಸುಭಾಷಚಂದ್ರ ಬೋಸರು ಒಂದಮೇಲೆ ವಿಶದವಾಗಿ ತಿಳಿಯಿತು. ಹಿಂದೆ ಇದು ಮೇಡಗಾಸ್ಕರ್ ಮುಖೇನ ನಡೆಯುತ್ತಿದ್ದಿತ್ತು ಈಗ ಜರ್ಮನಿಯಿಂದ ಸಿಂಗಪೂರಿಗೆ ನೇರವಾ ಸಬ್‌ಮೆರೀನು ಓಡಾಡುತ್ತಿದೆ. ಬೋಸರೆಯರು ಹೇಳುವುದು ಜರ್ಮನ್ ಕೆಲಸಗಾರರು ಜಪಾನಿಗೆ ಒಂದು ವಿಮಾನ ತಯಾರಿಕೆಯನ್ನು ಹೇಳಿಕೊಡುವರು. ಇದಕ್ಕೆ ಪ್ರತಿಯಾಗಿ ಜಪಾನೀಯರು ಜರ್ಮನಿಗೆ ಕಚ್ಚಾ ಪದಾರ್ಥಗಳನ್ನೂ ಕ್ವೀನ್ ಅಂಟಿಮನಿ ಟಿಕ್ಚರ್ ಟಂಗ್ಸ್ಟನ್ ಇವುಗಳನ್ನೂ ಕಳಿಸುವರು.

—

ಜ್ಯೋತಿಷ್ಯರ ವಿಚಿತ್ರ ನುಡಿಗಳು

ಒರಿಸ್ಸಾ ಪ್ರಾಂತ್ಯದ ಜ್ಯೋತಿಷ್ಯರು ಅವರು ಈ ವರ್ಷಕ್ಕಾಗಿ ರಚಿಸಿರುವ ಪಂಚಾಂಗಗಳಲ್ಲಿ ವರ್ಷ ಫಲದ ವಿಚಾರವನ್ನು ಅವರು ಹೀಗೆ ತಿಳಿಸಿರುವರು,

ಜ್ಯೋತಿಷಮತಾನುಸಾರ ಸನಾತನ ಧರ್ಮಾನುಸಾರ 23—7—43 ನೇ ದಿನ ಪ್ರಳಯ ಕಾಲವು ಉಪಸ್ಥಿತವಾಗುವುದು. 3 ದಿನಗಳವರೆಗೂ ಸೂರ್ಯನು ಕಾಣಬರುವುದಿಲ್ಲ ಅನೇಕರು ಮರಣ ಹೊಂದುವರು. ಪ್ರಪಂಚದಲ್ಲಿ ಹಾಹಾಕಾರವು ತುಂಬಿ ತುಳುಕುವುದು. ಕಲಿಯುಗ ಸಮಾಪ್ತಿಯಾಗುವುದು- 1—8—43 ನೇ ದಿವಸ ಸತ್ಯಯುಗವು ಪ್ರವೇಶವಾಗುವುದು. (ಕೆಲವರು 8-8-43 ನೇ ದಿನವೇ ಸತ್ಯಯುಗವು ಪ್ರವೇಶವಾಗುವುದೆಂದು ಬರೆದಿರುವರು. ಯಾರೋ ಕೆಲವರು ನಾವು ಮಾತ್ರಕ್ಕೆ ಉಳಿಯುವರು. ಮಿಕ್ಕವರೆಲ್ಲರೂ ಕಾಲನ ಆಹೀನವಾಗುವರು. ಜಲ್ಪೈ ಕೊನೆಯವರೆಗೂ ಜೀವಿಸಿರುವಂಥವರಿಗೆ ಆಗಸ್ಟು ತಿಂಗಳಲ್ಲಿ ಪೂರ್ಣ ಸುಖ ಪ್ರಾಪ್ತಿಯಾಗುವುದು.

ಈ ಎಲ್ಲವೂ ಸುಳ್ಳು, ಅಸತ್ಯ, ಅವರು ಹೇಳುವಂತೆ ಯಾವ ಓಗೆಯ ವಿಶೇಷ ಪರಿವರ್ತನೆಯು ಆಗುವುದಿಲ್ಲ.

"ಜ್ಞಾನಶಕ್ತಿ"

ಎಲ್ಲಾ ವಾರ್ತೆಗಳು

ಅರ್ಜೆಂಟೈನಾಕ್ಕೆ ತಂತೀವರ್ತಮಾನವನ್ನು ಗುಪ್ತ ರೀತಿಯಲ್ಲಿ ಕಳಿಸುವುದನ್ನು ನಿಲ್ಲಿಸಲಾಗಿದೆಯೆಂದು ಭಾರತ ಪೋಸ್ಟಾಫೀಸಿನವರು ಪ್ರಕಟಿಸಿರುವರು-

ಂ ಂ

200 ಜನರಿಗಿಂತ ಹೆಚ್ಚಾಗಿರುವ ಸಿತಿಫ್ ಪ್ರಾಂತ್ಯದಲ್ಲಿ ಪವಾಹದಿಂದ ನಷ್ಟಪಟ್ಟವರಿಗೆ ಮನೆ ಕಟ್ಟಲು ೨೦೦ ರೂಪಾಯಿ ಧರ್ಮಾರ್ಥವಾಗಿ ಸರ್ಕಾರದವರು ಕೊಡುತ್ತಾರೆ.

ಂ ಂ

ಬಿಹಾರಿನಲ್ಲಿ ಕರೆಯುವ ಹಸುವನ್ನು ಕೊಲ್ಲುತ್ತಿರುವುದನ್ನು ತಪ್ಪಿಸಬೇಕೆಂದು ಬೀಹಾರ್ ಛೇಂಬರ್ ಆಫ್ ಕಾಮರ್ಸ್ ನವರು ಸರ್ಕಾರಕ್ಕೆ ಮನವಿ ಮಾಡಿಕೊಂಡಿರುತ್ತಾರೆ.

ಂ ಂ

ಜರ್ಮನಿಯ ಕೀಲ್ ಬಂದರಿನಲ್ಲಿ ಜರ್ಮನ್ ಸಬ್‌ಮೆರೀನುಗಾರರು ಸಮುದ್ರದಲ್ಲಿ ಸಬ್‌ಮೆರೀನನ್ನು ಬಿಟ್ಟುಕೊಂಡು ಹೋಗುವುದಿಲ್ಲವೆಂದೂ, ಜರ್ಮನ್ ಸಬ್‌ಮೆರೀನಿನ ಆಟ ಮುಗಿಯಿತೆಂದೂ ಹೇಳಿ ಎರಡು ದಿನಸ ಮುಷ್ಕರ ಹಿಡಿದಿದ್ದರು.

ಂ ಂ

ಕಳೆದ ವಾರ ಜಾಂ ನಗರದ ಮಹಾರಾಜರು ಜಪಾನಿನಲ್ಲರುವ ಭಾರತೀಯರಿಗೆ ತಳಕಾಶವಾಣಿಯಲ್ಲಿ ಮಾನಾಡುತ್ತಾ, ಭಾರತೀಯರನ್ನು ಕರೆಸಿಕೊಳ್ಳುವ ಕಾಲವು ಬಹು ಜೀಗನಿರುವುದೆಂದೂ, ಜಪಾನೀಯರು ದಿನೇದಿನೇ ಕ್ಷೀಯಿಸುತ್ತಿರುವರೆಂದೂ ಹೇಳಿದರು.

ರಾಜಧಾನಿಯಲ್ಲಿ ಬಸ್ಸಿನ ಅನಾನುಕೂಲತೆ

ಮುಂಬಯಿನಲ್ಲಿ ಬಸ್ ಮತ್ತು ಟ್ರಾಂಬೆಗಳಲ್ಲಿ ಜನರು ಕೂತುಕೊಳ್ಳುವುದಕ್ಕಿಂತ ಹೆಚ್ಚು ಜನರು ಅಂದರೆ 1—2 ಅಂತಸ್ತುಗಳಲ್ಲಿ ಆರು ಜನರು ನಿಂತುಕೊಳ್ಳಲು ಪೋಲೀಸುಕಮಿಷನರು ಅನುಮತಿ ಇತ್ತರು. ಮೈಸೂರು ನಗರದಲ್ಲಿಯೂ ಏತಕ್ಕೆ ಇಂತಹ ಪದ್ಧತಿಯನ್ನು ಜಾರಿಗೆ ತರಕೂಡದು? ಮುಖ್ಯವಾಗಿ ಕೃಷ್ಣಮೂರ್ತಿಪುರಂನಲ್ಲಿ ಬಸ್ ಸರ್ವಿಸ್ ಕಮ್ಮಿಯಾಗಿದೆ. ಕಾಲಕ್ಕೆ ಸರಿಯಾಗಿ ಒರುವುದಿಲ್ಲ ಕೇಳಿದರೆ ನನಗೆ ಒಂಟಿಕೊಪ್ಪಲ್ ಮುಖ್ಯವೆನ್ನುವರು ಸಾರ್ವಜನಿಕ ಮೋಹಲ್ಲಾ ಮುನಿಸಿಪಲ್ ಕಮಿಷನರುಗಳು ಈ ವಿಷಯಕ್ಕೆ ಗಮನ ಕೊಡುವರೆಂದು ನಂಬಿದ್ದೇವೆ

ಐಸ್‌ಕ್ರೀಮ್ ಕಂದಪೆ ಕಾಲದಾ ಬರುತ್ತದೆ !

ಹೋದ ವರ್ಷ ಅಮೆರಿಕಾದಿಂದ ಮಿ|| ವೆಂಡಲ್ ವಿಲ್ಕಿಯವರು ಜುಕಿಎಗಿಗೆ ಬಂದಾಗ ಆ ನಗರವಪ ಮೇಯರ್ ಅವರಿಗೆ ಔತಣವನ್ನು ಕೊಟ್ಟಿಸು. ಆಗ ಒಂದಿದ್ದ ಅತಿಥಿಗಳಿಗೆಲ್ಲಾ ವಿಸ್‌ಕ್ರೀಮ್ ಕೊಡ ಲಾಯಿತು. ಈ ಸಮಾರಂಭದಲ್ಲಿ ವೆಂ ಯವರು ವಿಲ್ಕಿಗೆ ಬರಲ ವರ್ಷಗಳಿಂದ ಕ್ರೀಂಗಳನ್ನು ಯಾವಾ ಉದಯೋಗಿಸ ದಾಕೆ ಸರ್ಕಾರಿ ಅಜ್ಞೆಯಾಗಿದೆ. ಈ ದಿವಸ ಈಗ ಆ ಆಜ್ಞೆಯನ್ನು ತೆಗೆದುಹಾ ಕಿರುತ್ತೇವೆ. ಈ ಭೋಜನ ಮುಗಿದ ತೂತಲೇ ಮತ್ತೆ ಆ ಆಜ್ಞೆ ಜಾರಿಗೆ ಬರು ವುದು ಎಂದು ಹೇಳಿದರು. ಮಿ||ವಿಲ್ಕಿ ಯವರೂ ಅವರ ಇತರ ಸ್ನೇಹಿತರು ಕೊ ನೆಯಾವೃತ್ತಿ ಐಸ್‌ಕ್ರೀಂ ತಿಂದು ಮೇ ಯರನ್ನು ಇಂಥಾ ಬಹುಮಾನ ಯಾ ವಿಗೂ ಸಲ್ಲದ್ದನ್ನು ಮಾಡಿದ್ದಕ್ಕಾಗಿ ವಾ ದಿಸುತ್ತಾ ಇದರ ಕಾರಣವನ್ನು ಕೇಳಲು ಮೇಯರು ಜಹಿಂಗ್‌ನಲ್ಲಿ ಐಸ್‌ಕ್ರೀಂ ತಿಂದರೆ ಕಾಲರಾ ಬರುತ್ತದೆಂದು ಹೇಳಿ ದರು.

ಂ ಂ

ಪ್ರತಿಯೊಬ್ಬರಿಗೂ ದಿವಸಕ್ಕೆ ಎಷ್ಟು ತಲೆಯ ಕೂದಲ. ನಷ್ಟ ?

ಒಬ್ಬ ಆರೋಗ್ಯ ಮನುಷ್ಯನ ತಲೆಯ ಲ್ಲಿ ಸುಮಾರು ಒಂದೂವರೆ ಲಕ್ಷ ಕೂದ ಲುಗಳಿವೆ. ಇವಲ್ಲಿ ಪ್ರತಿದಿವಸವೂ ಸು ಮಾರು 40 ಎಷ್ಟು ಹಾಳಾಗುವವು ; ಅಂ ದರೆ ತಲೆ ಬಾಚಿಕೊಳ್ಳುವಾಗ ಕೆಲವೂ ಮತ್ತೆ ಕೆಲವು ಹೇಗೋ ಪದ್ದ ಹೋಗು ವುವು.

ಶಾಸ್ತ್ರಜ್ಞರು ಒಂದು ಕೂದಲನ್ನು ನೋಡಿ ಅದು ಹೆಂಗಸಿನದೋ ಗಂಡಸಿ ನದೋ ಹೇಳಬಲ್ಲರು. ಅವರು ಬಂದು ತಲೆಕೂದಲನ್ನು ಭೂತಕನ್ನಡಿಯಲ್ಲಿ ನೋ ಡುತ್ತಾರೆ. ಇದು ಜೀವಶೇಯನ ಕೂದಲು ಎಂದು ಹೇಳಬಲ್ಲರು. ಜರ್ಮ ಕಣ್ಣಾ ಸ್ವಭಾವಗಳ ಹಾಗೆಯೇ ಕೂದಲೂ ಮನುಷ್ಯನ ಜಾತಿಯಂತೆಯನ್ನು ತಿಳಿಸುವುದು ಮಸಲಾ ಒಂದು ಮುಂಗೋಲಿಯಾದವರ ಕೂದಲನ್ನು ನೋಡಿದರೆ ಅದು ಬಾಗಿರುವ ನೆಟ್ಟಗಿರುತ್ತದೆ. ಮಧ್ಯದಲ್ಲಿ ಒಂದು ರೀತಿಯಾಗಿರುತ್ತದೆ, ಗುಂಗುರುಗುಂಗುರಾ ಗಿರುತ್ತದೆ. ಯೂರೋಪಿಯನ್ನರ ಕೂ ದಲು ನುಣುಪಾಗಿರುವದು ಮಧ್ಯದಲ್ಲಿ ಒಂದು ರೀತಿಯಾಗಿರುವುದಿಲ್ಲ. ನೀಗ್ರೋ ಜನರ ಕೂದಲು ರಿಬ್ಬನ್ ಆಕಾರವಾಗಿರು ತ್ತದೆ, ಸಾಧಾರಣವಾಗಿ ಗುಂಗುರಾಗಿ ರುತ್ತವೆ.

ಚಿತ್ರ .... ವಿಚಿತ್ರ

ಒಬ್ಬ ಜರ್ಮನ್ ಶಾಸ್ತ್ರಜ್ಞನು ಮರ ದಿಂದ ಕೃತಕ ಮಾಂಸವನ್ನು ತಯಾರಿಸಿ ಡಿದನು. ಇದನ್ನು ಜೀರ್ಣಿಸಿ ತಿನ್ನಬಹು ದು.

ಇನ್ನೊಬ್ಬ ಜರ್ಮನನು ಹಿಂದು ಘನ ಅಡಿ ವರದಿಂದ 22 ಗ್ಯಾಲನ್ ಕೃತಕ ಪೆಟ್ರೋಲನ್ನು ತಯಾರಿಸಬಹುದಾದ ವಿಧಾನ ವನ್ನು ಕಂಡುಹಿಡಿದಿರುವನು.

ಇನ್ನೊಬ್ಬ ಜರ್ಮನನು ಓಕ್ ಮರ ದಿಂದ ಬೆಣ್ಣೆಯನ್ನು ತಯಾರಿಸುವನು.

ಫ್ರೆಂಚ್‌ನವನೊಬ್ಬನು ಜೇನ್ ನೆಟ್ ಕಾಯಿಂದ ಸಕ್ಕರೆ ತಯಾರಿಸಬಹುದು.

ಹ್ಯಾಂಬರ್ಗ್‌ನಲ್ಲಿ ಒಂದು ವರದ ಕಾ ರ್ಖಾನೆಯಲ್ಲಿ ಬೇಕಾದ 200 ಪೌಂಡು ಮರದ ಪುಡಿಯಿಂದ 60–80 ಪೌಂಡ ಸಕ್ಕರೆ ತಯಾರಿಸುವರು.

ಂ ಂ

ವೀರಶೈವ

ಸಿತಾನಗರ ಸಂಸ್ಥಾನದಲ್ಲಿ ವೀರಶೈ ವವು ಪ್ರಾಬಲ್ಯವಾಗಿದೆ. ಕಾಡಿನಲ್ಲಿ ವಾ ಸವಾರವನ್ನು ಅನೇಕ ಹಳ್ಳಿಯವರು ಜಾ ಮೂ, ಬಿಜೂರಾ, ಗೆಡ್ಡೆಗೆಣಸು, ಎಲೆ ಇವನ್ನು ತಿಂದು ಜೀವಿಸುತ್ತಿರುವರು ತಿನ್ನಲಿಕ್ಕೆ ಇಲ್ಲದವಸ ಧಾನ್ಯಗಳನ್ನು ತರಿಸಿ ಎಂದು ಪ್ರಜೆಗಳು ಪ್ರತಿ ದಿವಸವು ಗಲಭೆಮಾಡಿದರು. ಅಧಿಕಾರಿಗಳು ನಮ ಗೆ ಆಹಾರ ಸಿಗುವಕಡೆ ಹೋಗಿ, ಇಲ್ಲಿ ನಾವು ಏನೂ ಮಾಡಲು ಆಗುವದಿಲ್ಲವೆ ನ್ನುವರು. ರಾಜಾದಾಯ ಹೆಚ್ಚಿಗೆ ಬರಲು ಓಸಿಯಂ, ಹಶ್ಶಿ ಇವನ್ನು ಬೆಳೆ ದು ಬಧಾನೆಯನ್ನು ತುಂಬಿಕೊಳ್ಳುತ್ತಿ ದ್ದಾರೆ.

ಂ ಂ

ಮುಖಕ್ಕೂ ಬೆಲೆಯೇ ?

ಸಿನ್ ಸೀಟುಗಳು ಯುದ್ಧಕ್ಕೆ ಮುಂ ಚೆ ಒಂದಕ್ಕೆ ಎರಡಾಣೆಯಂತೆ ಚಿಲ್ಲರೆ ಚಿಕ್ಕಾಯಾಗುತ್ತಿದ್ದವು. ಒಂದರಲ್ಲಿ 250 ಸೂಚಿಸಲಿರುತ್ತಿದ್ದವು. ಅಂದರೆ ಸಾಮಾ ನ್ಯಕ್ಕೆ ಎಂಟಾಣೆ ಇತ್ತು. ಈಗ ಅದರ ಬೆಲೆ ಹೇಳತೀರದಾಯಿತು. ಇದರ ವಿ ಷಯ ಹೀಗಾಯಿತೆ ! ಈಗ ಹಿಂದೂ ಸ್ಥಾನದ ಸರಕಾರಕ್ಕೆ 25 ಲಕ್ಷ ಜಾಲಿ ಮುಳ್ಳು ಬೇಕಾಗಿದೆ. ಇದನ್ನು ಶಿಪಿಕ್ (ಗುಂಡುಸೂಜಿ) ಒದಲು ಸರ್ಕಾರಿ ಕಾಗದಪತ್ರಗಳಿಗೆ ಉಪಯೋಗಿಸುವುದ ಕ್ಕೆ ಉಪಯೋಗಿಸವರು. ಒಂದು ಸಾ ವಿರಕ್ಕೆ ಒಂದು ರೂಪಾಯಿ ಬೆಲೆ ಕೊಡು ವರು. ನಮ್ಮ ಪೈತರು ಈ ಮುಳ್ಳನ್ನು ಯಾತಕ್ಕೆ ಬೆಳೆದು ದುಡ್ಡು ಸಂಪಾದಿಸ ಕೂಡದು.

ಜನಸಂಖ್ಯೆ ಹೆಚ್ಚಿತು ಬೆಳೆಯು ತಗ್ಗಿತು !

ಭಾರತ ದೇಶದಲ್ಲಿ ಮುಖ್ಯವಾದ ಆಹಾರ ಪದಾರ್ಥ ಅಕ್ಕಿ. ಶೇಕಡಾ 70 ಮಂದಿ ಅಕ್ಕಿಯಿಂದ ತಯಾರಿಸಿದ ಅನ್ನವನ್ನು ತಿನ್ನುವಂಥವರು. ಪ್ರಪಂಚ ದಲ್ಲೆಲ್ಲಾ ಇಂಡಿಯಾದಲ್ಲಿ ತರೀಬೆಳೆಯು ಎಮಿಗಳು ಹೆಚ್ಚು. 7 ಕೋಟಿ 25 ಲಕ್ಷ ಎಕರೆಗಳ ಭೂಮಿಯಲ್ಲಿ ತರೀಬೆಳೆ ಯು ಬೆಳೆಯುತ್ತದೆ. ಭತ್ತದ ಬೆಳೆಯು ಲ್ಲಿ ಮೊದಲನೆಯದು ಚೈನಾ, ಎರಡನೆ ಯದು ಇಂಡಿಯಾ. ಚೈನಾದ ಬೆಳೆ 5 ಕೋಟಿ 70 ಲಕ್ಷ ಟನ್ನುಗಳು.

ಕಳೆದ 20 ವರ್ಷಗಳಿಂದ ಇಂಡಿಯಾ ದ ತರೀಬೆಳೆ ತಗ್ಗುತ್ತಿದೆ. ಜನಸಂಖ್ಯೆ ಶೇಕಡಾ 18 ರಷ್ಟು ಹೆಚ್ಚಿದೆ. ಬೆಳೆಯು ಶೇಕಡಾ 8 ರಷ್ಟು ತಗ್ಗಿದೆ.

1925–26 ರಲ್ಲಿ ಎಕರೆಗೆ 729 ಬುಷಲ್‌ಗಳು ಬೆಳೆಯುತ್ತಿದ್ದುದು 1937–41 ಕ್ಕೆ ಈ ಪ್ರಮಾಣವು 25 ಬುಷಲ್‌ಗಳಿಗೆ ತಗ್ಗಿತು, ಜಪಾನಿನಲ್ಲಿ ಎಕರೆಗೆ 68 ಬು ಷಲುಗಳನ್ನು ರಳಿಸುವರು.

ಆದುದರಿಂದ ಇಂಡಿಯಾದಲ್ಲಿ ಪ್ರಜೆ ಗಳಿಗೆಲ್ಲರಿಗೂ ಸಾಕಾಗುವಷ್ಟು ಭತ್ತವು ಬೆಳೆಯುವದಿಲ್ಲ. ಬರ್ಮಾವನ್ನು ಜಪಾನು ಆಕ್ರಮಿಸಿಕೊಂಡ ಕಾರಣದಿಂದ ಇಂಡಿ ಯಾದ ಸ್ಥಿತಿಯು ಕ್ಲಿಷ್ಟವಾಗಿ ಪರಿಣ ಮಿಸಿದೆ.

ಭೂಮಿಯಲ್ಲಿ ಅಧಿಕ ಜಿಳೆ ಬೆಳೆಯು ವಂತಾಗಬೇಕು. ಹೆಚ್ಚು ಮಂದಿ ವ್ಯವ ಸಾಯ ಕಾರ್ಯದಲ್ಲಿ ಇಳಿಯಬೇಕು ಜಲಸಮೃದ್ಧಿಯಾಗಿರುವಂತೆ ಸರಕಾರದ ವರು ನೀರಾವರಿಯ ಕೆಲಸಗಳನ್ನು ಮಾ ಡಿಸಬೇಕು. ಕೇವಲ ಅಕ್ಕಿಯನ್ನು ಎಲ್ಲ ರೂ ಉಪಯೋಗಿಸಲು ಇಚ್ಛಿಸದೆ ನವಣೆ ರಾಗಿ ಮೊದಲಾದುವನ್ನು ಹಿಂದಿನಂತೆ ಹೆಚ್ಚಾಗಿ ಉಪಯೋಗಿಸುವವರು ಇರ ಬೇಕು. ಆಗ ಇಂದಿನ ಕೊರತೆಯು ಪರಿಹಾರವಾಗುವುದು.

ಇನ್ನು ಮುಂದೆ ಇಂಗ್ಲೆಂಡಿನಿಂದ ಇಂಡಿಯಾಕ್ಕೆ ಫೋಟೋಗಳನ್ನು ಟೆಲಿ ಗ್ರಾಫ್ ರೂಪದಲ್ಲಿ ಕಳಿಸಲು ಪೋಸ್ಟ್ ಆಫೀಸ್‌ನವರು ಏರ್ಪಾಡುಮಾಡಿರುವರು.

ಂ ಂ

ಯಾರಾದರೂ ಸೈಕಲ್ ನಂಬರನ್ನು ಅಳಿಸಿ ಬೇರೆ ನಂಬರನ್ನು ಹಾಕಿದರೂ ಒಂದು ತರಹ ದೃತಿಯಿಂದ ಹಿಂದಿದ್ದ ನಂ ಬರು ಪತ್ತೆಯಾಗುವುದೆಂದೂ ಆ ಪದ್ಧತಿ ಯು ಇಂಗ್ಲೆಂಡ್ ಪೋಲೀಸ್ ಸ್ಕಾಟ್ ಲೆಂಡ್‌ಯಾರ್ಡ್ ವಿನಹ ವ ತ್ಯಾರಿಗೂ ಗೊತ್ತಿಲ್ಲವೆಂದೂ ಹೇಳಲಾಗಿದೆ

ವರ್ತಮಾನ ಸಂಗ್ರಹ

ಜಾವಾ ರಾಜಕುಮಾರಿಯು ಈಗ ಅಮೆರಿಕಾದಲ್ಲಿ ರೇಡಿಯೊ ಕೈಗಾರಿಕೆಯ ನ್ನು ಕಲಿಯುತ್ತಿರುವಳು.

ಂ ಂ

ಈಗ ಅಮೆರಿಕಾದವರು ಒಂದು ಹೊಸ ತರಹ ಸಿಡಿಮದ್ದನ್ನು ತಯಾರುಮಾಡಿರು ವರು. ಇದ TNT ಗಿಂತ ಶೇಕಡ 35 ರಷ್ಟು ಶಕ್ತಿಯುಳ್ಳದ್ದು. ಇದಕ್ಕೆ RDX ಎಂದು ಹೆಸರು. ಹಿಂದಿನ ಯು ದ್ಧಕ್ಕಿಂತ ಅಮೆರಿಕಾದ ಟ್ಯಾಂಕ್ ಶಕ್ತಿ ಶೇಕಡ 50 ರಂತೆ. ಜಂಟಿ ವಿಮಾನಕ್ಕಾಗಿ ಶಕ್ತಿ 100, ಟ್ಯಾಂಕ್ 700, ಸೇನೆ 250, ಬಾಂಬಿನ ಶಕ್ತಿ 300 ಹೆಚ್ಚಿದೆ.

ಂ ಂ

ಇಂಡಿಯಾ ಬಸ್ಸಿನಲ್ಲಿ ಜಾರ್ಡಿ ನೋವಾ ಎಂಬ ಬಾದ್ವೀಪವಿದೆ. ಇಲ್ಲಿ ಯಾವ ಮನುಷ್ಯನೂ ವಾಸಮಾಡಿ ಲ್ಲ. ಅಲ್ಲಿರುವುದು ಪಕ್ಷಿಗಳು, ಅವೆ ಮತ್ತು ಬೊಗಳದ ನಾಯಿಗಳು

ಂ ಂ

ಮೊನ್ನೆ ಜಪಾನಿನಲ್ಲಿ ಭೂಕಂಪವಾಗಿ ಟೋಕಿಯೊ ನಗರದಲ್ಲಿ ಹಲವು ಮನೆಗಳು, ಗಾಡಿಗಳು ಪಾತ್ರ ನಾಶವಾಯಿತೆಂದೂ ಇನ್ನು ಕೆಲವು ಕಡೆ ಗೋಡೆಗಳು ಅಲ್ಲಾ ಡಿವೆಯೆಂದೂ ಗಡಿಯಾರಗಳು ಮಾತ್ರ ಅನೇಕ ಕಡೆ ನಿಂತು ಹೋದವೆಂದು ಹೇಳ ಲಾಗಿದೆ ಭೂಕಂಪವು ಟೋಕಿಯೋಗೆ 50 ಮೈಲಿ ದೂರದಲ್ಲಿರುವ ಷಿನಿಟ್ಸುಮ ವೇ ಕೇಂದ್ರಸ್ಥಳವಾಗಿದ್ದಿತಂತೆ.

ಂ ಂ

ಸಂಜಾಬಿನಲ್ಲಿ ಒಂದು ಹೊಸ ಸಂಸ್ಥೆ ಯು ಸ್ಥಾಪಿತವಾಗಿದೆ ಇವರೆಲ್ಲರೂ ಮುಸಲ್ಮಾನರು. ಸಿನಿಮಾ ನೋಡುವು ದರಿಂದ ವಿಗ್ರಹಗಳನ್ನು ಪೂಜಿಸುವಂತಾ ಗುವುದೆಂದು ತಮ್ಮ ಪಂಗಡದವರು ಯಾ ರೂ ಸಿನಿಮಾ ನೋಡಕೂಡದೆಂದು ಕಟ್ಟು ಳೆಮಾಡಿಕೊಂಡಿರುವರು. ಇದನ್ನು ಸ್ಥಾ ಪಿಸಿದವರು ಮೀರ್ ಜಾಗುಲಾಂ ಅಹ ಮದ್ ಖಾನ್ಸಿ. ಈ ಸಂಸ್ಥೆಗೆ ಖಾದಿಯಾ ನಿ ಮತ ವೆಂದು ಹೆಸರು.

ಂ ಂ

ಭಾರತದ ಹೊಸ ಕಮಾಂಡರ್ ಇನ್ ಛೀಫರು ನಿನ್ನೆ ದೆಹಲಿಯಲ್ಲಿ ಭಾಷಣ ಮಾಡುತ್ತಾ ಸಶ್ಚಿಮ ಭಾರತಕ್ಕೆ ಜರ್ಮ ನರ ಹೆದರಿಕೆ ತಪ್ಪಿತು, ಪೂರ್ವದಲ್ಲಿ ಜಪಾನಿ ಗಟ್ಟಿಗರು ಸೋಲಿಸಲ್ಪಟ್ಟರ ಪ್ರಾಣಪಡುವವರು, ಅವರನ್ನು ನಿರ್ಮೂಲ ಮಾಡುವ ಸೇನೆಯು ಈಗ ಭಾರತದಲ್ಲಿದೆ ಎಂದರು.

ದೇಶಾಭಿಮಾನ ಸ್ವಾಭಿಮಾನ

ಇವುಗಳೆರಡರ ದೃಷ್ಟಿಯಿಂದಲೂ ಮೈಸೂರಿನವರಿಗೆ ಜೀವವಿಮೆ ಮಾಡಲು

ಮೈಸೂರು ಸರ್ಕಾರದ ಜೀವವಿಮೆ ಇಲಾಖೆಯ

ಪ್ರಜೆಗಳ ಶಾಪೆಯೇ ಅತ್ಯುತ್ತಮ ಸಂಸ್ಥೆ!

ವಿಮೆಯ ಮೊಬಲಗಿಗೆ ಸರ್ಕಾರವ ಹುಟ್ಟುವಳಿಯೇ ಆಧಾರ
ವಿಮೆಯಹಣವನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಸಾವತಿಸಾಡಲಾಗುವದು
ವಿಮೆದಾರರಿಗೆ ಆಡಳಿತ ಸಮಯದಲ್ಲಿ ಪ್ರಾತಿನಿಧ್ಯವುಂಟು
ಸಾವಿರಕ್ಕೆ ಸಾಲಿಯಾನಾ ಇಪ್ಪತ್ತು ರೂ. ಗಳಂತೆ ಬೋನಸ್ ಹಂಚಿದೆ

ಹೆಚ್ಚು ವಿವರಗಳಿಗೆ ದಯವಿಟ್ಟು ಬರೆಯಿರಿ—

ಸೆಕ್ರೆಟರಿ,
ಮೈಸೂರು ಸರ್ಕಾರದ ಜೀವವಿಮೆ ಇಲಾಖೆ
ಬೆಂಗಳೂರು.

ಸತ್ಯವಾದಿ ಪತ್ರಿಕೆಗೆ ಚಂದಾದಾರರಾಗಿರಿ

ಮೈಸೂರು ವೈಶ್ಯ ಪತ್ರಿಕೆ

ಉತ್ತಮ ಸಚಿತ್ರ ಕನ್ನಡ ತೆಲಗು

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ಈಗಿಗ ವಾರ್ಷಿಕ ಚಂದಾ ರೂ. 3—0—0

ಬಿಡಿ ಪ್ರತಿ 4 ಆಣೆ.

ಹಿಂಬಾಫಮ್ಸ್ ಥೈಲ್ವೆ ಬುಕ್‌ಸ್ಟಾಲ್ ನಲ್ಲಯೂ ಪತ್ರಿಕೆಯು ತೊರೆಯುತ್ತೆ.

ಕಾರ್ಯಾಲಯ;
ಶ್ರೀ ವಾಸವಾಂಬ ಭವನ
ಅಶೋಕ ರಸ್ತೆ — ಮೈಸೂರು

ಅಕ್ಕರ

ಸಾಮಾಜಿಕ
ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ವರ್ತಮಾನ

ಮಿರಾಜಿನಲ್ಲಿ 50 ಜನ ಕಳ್ಳರು ಪೋಲೀಸರ ಹಾಗೆ ವೇಷಾ ಹಾಕಿಕೊಂಡು ಒಂದು ಮನೆಗೆ ನುಗ್ಗಿ 50 ಸಾವಿರ ರೂ ಪಾಯಿ ಬಾಳುವ ವಸ್ತುಗಳನ್ನು ಅಪಹರಿಸಿರುತ್ತಾರೆ.

ಂ ಂ

ಸಯಾಂ—ಜಪಾನಿ ಈ ಎರಡು ರಾಜ್ಯಗಳಿಗೆ ಮನಸ್ತಾಪವಾಗಿರುವುದಂದ ಇದನ್ನು ಪರಿಹರಿಸಲು ಜಪಾನ್ ಪ್ರಧಾನ ಹುಂತ್ರಿ ಟೋಜೋ ಈಗ ಸಯಾಂಗೆ ಬಂದಿರುತ್ತಾನೆ.

ಂ ಂ

ಈಗ ಮದರಾಸಿನಲ್ಲಿ ಊಟದ ಖರ್ಚು 180 ಪಾಯಿಂಟಿಗೆ ಏರಿದೆ. ಅಂದರೆ ಯುದ್ಧ ಪ್ರಾರಂಭವಾದಾಗ 100 ರೂಪಾಯಿ ಆಗುತ್ತಿದ್ದಿದ್ದು ಈಗ 180 ರೂಪಾಯಿ ಎಂದರ್ಥ.

ಂ ಂ

ಮದರಾಸು ಟರ್ಕಗೆ ನೀರು ಒದಗಿಸುವ ಪುಂಡಿ ರಿಜರ್‌ವಾಯಿರ್‌ಗೆ "ಸತ್ಯಮೂರ್ತಿ ರಿಜರ್‌ವಾಯಿರ್" ಎಂದು ನಾಮಕರಣ ಮಾಡಬೇಕೆಂದು ಅಲ್ಲಿನ ಮುನಸಿಪಲ್ ಕೌನ್ಸಿಲರುಗಳು ಆಲೋಚಿಸಿರುವರು.

ಂ ಂ

ನ್ಯೂಜಾರ್ಜಿಯ ದ್ವೀಪದಲ್ಲಿ ಮಿತ್ರರು ಮುಂದೆ ನುಗ್ಗಲು ಅಣಿ ಮಾಡಿಕೊಳ್ಳುತ್ತಿರುವರು.

ಂ ಂ



3rd Glorious Week

Ranjit Talkies ಈ Krishna Sudhama

ಕಲ್ಯಾಣಿಯವರ ಮಹೋನ್ನತ ಪೌರಾಣಿಕ ಕನ್ನಡ ಚಿತ್ರ

ಎಸ್. ಡಿ. ಸುಬ್ಬಲಕ್ಷ್ಮಿ, ಬೆಳ್ಳಾವಿ ನರಹರಿಶಾಸ್ತ್ರಿ, ಕುಮಾರಿ ಚಂದ್ರಮ್ಮ
ವಿನಾಕ್ಷಿ ನಂಧುಗಿರಿ ಮುಂತಾದವರ ಅಭಿನಯ

ಕೃಷ್ಣಸುಧಾ

ಮೈಸೂರು ರಣಜಿತ್ ಟಾಕೀಸಿನಲ್ಲಿ

ಕಿಕ್ಕಿರಿದ ಜನಸಂದಣಿ

3ನೇ ಅಮೋಘ ವಾರ

ಕೃಷ್ಣಸುಧಾ

ಸೇವನೆಯಿಂದ ರಕ್ತಕೊರತೆ, ಮಲಬಂಧ, ನರಗಳ ಅಶಕ್ತತೆ, ದೌರ್ಬಲ್ಯ, ನಿದ್ರಾಭಂಗ ನಿವಾರಣೆಯಾಗಿ, ಸಂಸಾರಸುಖಕ್ಕೆ ಅಪರಿಮಿತ ಶಕ್ತಿ ಲಭಿಸುವದು ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ. ಬೆಲೆ 1 ರೂಪಾಯಿ

ಭಂಗಾರ ಬೆಳ್ಳಿ ಧಾರಣೆ

ಸವರನ್	ರೂ.	57—8—0
ಬಂಗಾರ ತೊಲ	ರೂ.	78—0—0
ಬೆಳ್ಳಿ ,,		1—3—6

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

ಮಾತೃಭೂಮಿಗೆ ಚಂದಾದಾರರಾಗಿ

ಮೈಸೂರು ಏಜೆಂಟ್—ಚಂದ್ರಶೇಖರ್

Edited, Printed & published by M. S. Krishna Rao, at the Satyavadi Press. Chamaraja Agrahara, Mysore.